
ಮಾತಾಡುವ
ಗಲ್ಲ ಹಿಂಡುವ ನಗಿಸುವ ಹಾಡ ಹೇಳುವ
ಆಡಿಸುವ ಜನ ತೊಟ್ಟಿಲ ತೂಗುವ ಕೈಗಳೂ
ಅರೆಗಳಿಗೆ ಮೂಲೆಯಲಿ ಕೂಡದ ಮನಕೆ
ಕರುಳ ಚಪ್ಪರ ಕಾಪಿಡುವ ಕಡಲ ಧ್ಯಾನ
ಸಗ್ಗವೇ ಕಾಲ ಬುಡಕೆ ಬಿದ್ದರೂ ಹಿಂಗದ ಅಸಮಾಧಾನ
ಅತ್ತ ಯಾರು ಬಂದರು ಇತ್ತ ಯಾರೋ ಹಾದು ಹೋದರೂ
ಉಳಿದ ಗೈರಿಗೆ ಉಪಮೆ ಇಲ್ಲ
ಎಲ್ಲ ಎಲ್ಲ ನೆರಳೂ ಬಿಸಿಯಾಗುವ ಕೊರಗು
ಕಾದು ಕೂತೇ ಇದೆ ಕಂದ ಬೆರಳ ಮೀಟಿಗೆ ಕಾದ
ವೀಣೆಯಂತೆ
ನೆತ್ತಿಯನು ಸವರುವ ಬೆಣ್ಣೆ ಗಳಿಗೆಗೆ

ಕೇಳುತಿದೆಯೆ ಅಮ್ಮ?
ಕಂದನ ಕಣ್ಣದನಿ?
ಬೆರಳು ನುಡಿಸುವ ತಂಬುರ?
ಬಂದು ಬಿಡು ಬೇಗ
ಜಗದ ತೊಟ್ಟಿಲ ಒಮ್ಮೆ ತೂಗಿಬಿಡು
ಮೊಣಕಾಲೂರಿ ಕೂತಿದೆ ಮಗು ಹೊಸ್ತಿಲಿಗೆ
ನೀನೆಳೆದ ರಂಗವಲ್ಲಿ ಅದು ಕರುಳ ಹೂ.

**● ವಾಸುದೇವ ನಾಡಿಗ್**



ವಾಗೀಶ ಹೆಗಡೆ